# ಎಲ್ಲೆಲ್ಲೂ ಉದ್ವೇಗವೇ...



**ಸ್ನೇಹಸಂಬಂಧ ಬೆಸೆಯಬೇಕಾಗಿದ್ದ ಸಾಮಾಜಿಕ ಜಾಲತಾಣಗಳು ವ್ಯಕ್ತಿಗಳ ನಡುವಿನ ಒಡಕಿಗೆ ಕಾರಣವಾಗುತ್ತಿವೆ. ಮನಸ್ಸುಗಳ ನಡುವೆ ಬಿರುಕು ಉಂಟುಮಾಡುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿನ ಆತ್ಮರತಿ ಹಾಗೂ ವಿಕೃತಿ, ಸಾಮಾಜಿಕ ವ್ಯವಸ್ಥೆಗೆ ಹಿಡಿದಿರುವ ಕನ್ನಡಿಯಂತಿದೆ. 'ಕಾಲ ಕೆಟ್ಟುಹೋಯಿತು' ಎನ್ನುವುದು ಎಲ್ಲ ಸಂದರ್ಭಗಳಲ್ಲೂ ಕ್ಲೀಷೆಯಲ್ಲ.**

**■ ಪಿ. ಬಿ. ಪ್ರಸನ್ನ**

ಕೆಲವು ದಿನಗಳ ಹಿಂದಿನ ಘಟನೆ. ಆಂಧ್ರಪ್ರದೇಶದಲ್ಲಿ ಪುಟ್ಟ ಬಾಲಕಿಯ ಮೇಲೆ ಅತ್ಯಾಚಾರ ನಡೆದಿತ್ತು. ಆ ಬಾಲಕಿಯನ್ನು ಕ್ರೂರಿಗಳು ಕೊಂದುಹಾಕಿದ್ದರು. ಅದೊಂದು ಅತ್ಯಂತ ಹೇಯ ಕೃತ್ಯ. ಸಂಶಯವೇ ಇಲ್ಲ. ಕೆಲವು ದಿನಗಳ ನಂತರ ನನ್ನ ಪರಿಚಯದವರ ವಾಟ್ಸ್ಆ್ಯಪ್ ಸ್ಟೇಟಸ್ ಗಮನಿಸಿದೆ. ಹಲವು ಮಂದಿ ಆ ಬಾಲಕಿಯು ಸಂತೋಷದಿಂದ ಕುಣಿಯುತ್ತಿದ್ದ ವಿಡಿಯೊ ಹಾಕಿದ್ದರು. ನಂತರ ಆಕೆಯ ಮೇಲೆ ಅತ್ಯಾಚಾರ ಆಗಿದೆ ಎಂದೂ, ಅವಳಿಗೆ ನ್ಯಾಯ ಸಿಗಬೇಕು ಎಂದೂ ಹಾಕಿದ್ದರು. ಮಾತ್ರವಲ್ಲ ಪೋಸ್ಟ್‌ಮಾರ್ಟಂ ಆಗಿಬಂದ ಆಕೆಯ ಶವದ ಕಟ್ಟನ್ನು ಬಿಚ್ಚಿ ಮುಖವನ್ನು ಮನೆಯವರಿಗೆ ತೋರಿಸಿದ ವಿಡಿಯೊವನ್ನು ಕೂಡ ಹಾಕಿದ್ದರು. ಒಂದಿಬ್ಬರು ನನ್ನ ಪರಿಚಯದವರ ಬಳಿ ಆ ವಿಡಿಯೊವನ್ನು ಹಾಗೆ ಸ್ಟೇಟಸ್‌ನಲ್ಲಿ ಹಾಕಿದ್ದರ ಬಗ್ಗೆ ಬೇಸರದಿಂದ ಹೇಳಿದೆ. ಅವರು, 'ಆ ಮಗುವಿಗೆ ಸಾಮಾಜಿಕ ನ್ಯಾಯ ಕೊಡಿಸುವ ಬಗ್ಗೆ ನಾವು ಕಾತುರರಾಗಿದ್ದೇವೆ' ಎಂದರು. ಅವರ ಕಾಳಜಿಯೇನೋ ಒಪ್ಪತಕ್ಕದ್ದು. ಆದರೆ, ಅತ್ಯಾಚಾರಕ್ಕೆ ಒಳಗಾದವರ ಗುರುತನ್ನು ಬಹಿರಂಗಗೊಳಿಸುವುದು ಎಷ್ಟರ ಮಟ್ಟಿಗೆ ಸರಿ? 'ನಿಮ್ಮ ಅಭಿಯಾನ ಆ ಮಗುವಿನ ಮನೆಯವರಿಗೆ ಕಿರಿಕಿರಿಯನ್ನು ಉಂಟುಮಾಡಿ ನೋವಿನಿಂದ ಬಳಲುತ್ತಿರುವವರ ನೆಮ್ಮದಿಯನ್ನು ಮತ್ತಷ್ಟು ಕೆಡಿಸುವುದಿಲ್ಲವೇ?' ಎಂದು ಕೇಳಿದೆ. ಅದಕ್ಕೆ ಅವರಲ್ಲಿ ಸ್ಪಷ್ಟ ಉತ್ತರ ಇರಲಿಲ್ಲ.

ಮೇಲಿನದ್ದು ಒಂದು ಉದಾಹರಣೆ ಮಾತ್ರ. ಇಂದು ಸಾಮಾಜಿಕ ಜಾಲತಾಣಗಳಲ್ಲಿ ಅನ್ಯಾಯಕ್ಕೆ ಒಳಗಾದವರ ಪರವಾಗಿ ಪೋಸ್ಟ್‌ಗಳನ್ನು ಹಾಕುವ ಪ್ರವೃತ್ತಿ ಹೆಚ್ಚುತ್ತಿದೆ. ನ್ಯಾಯದ ಪರವಾಗಿ ನಮ್ಮದೂ ಒಂದು ದನಿ ಇರಲಿ ಎಂಬುದು ಅದರ ಆಶಯ. ದುರಂತ ಎಂದರೆ ಎಷ್ಟೋ ಸುದ್ದಿಗಳು ನಿಜ ಆಗಿರುವುದಿಲ್ಲ. ಎಲ್ಲೋ ಆಗಿರುವ ಘಟನೆಯನ್ನು ಮತ್ತೆಲ್ಲೋ ಆಗಿದೆ ಎಂದು ಬಿಂಬಿಸುವುದು, ಫೋಟೊಶಾಪ್‌ನಲ್ಲಿ ಎಡಿಟ್ ಮಾಡುವುದು ಇತ್ಯಾದಿಗಳ ಮೂಲಕ ಸುಳ್ಳು ಸುದ್ದಿಗಳನ್ನೇ ಬಿಂಬಿಸುವ ಪ್ರವೃತ್ತಿ ಹೆಚ್ಚುತ್ತಿದೆ.

ಯುವ ಜನಾಂಗದವರ ಕೈಯಲ್ಲಿ ಮೊಬೈಲ್ ಇಂದು ಮಂಗನ ಕೈಯ ಮಾಣಿಕ್ಯದಂತೆ ಆಗಿದೆ. ಎಲ್ಲೋ ಆಗಿರುವ ಅಪಘಾತ, ಕೊಲೆ, ಇತ್ಯಾದಿಗಳ ಚಿತ್ರ–ದೃಶ್ಯಗಳನ್ನು ಕ್ಷಣ ಮಾತ್ರದಲ್ಲಿ ಹಂಚುವ ಉಮೇದಿನಲ್ಲಿ ಯುವಜನ ಇರುತ್ತಾರೆ. ಇದೊಂದು ರೀತಿಯ ವಿಕೃತ ಆನಂದ ಎಂದರೆ ತಪ್ಪಾಗಲಾರದು. ಯಾವುದೋ ಹೆಣ್ಣಿನ ಚಿತ್ರವನ್ನು ಪೋಸ್ಟ್ ಮಾಡಿ, 'ಈಕೆ ಮದುವೆ ಆಗಿ ಮೊದಲ ರಾತ್ರಿ ಆಗುವ ಮುನ್ನವೇ ಗಂಡನನ್ನು ಕಳೆದುಕೊಂಡಿದ್ದಾಳೆ. ಇವಳು ಮರು ಮದುವೆ ಆಗಬಹುದೇ?' ಎಂದೆಲ್ಲ ಕೇಳುವ ಪಟಗಳು ಸಾಮಾಜಿಕ ಜಾಲತಾಣಗಳಲ್ಲಿ ಕಾಣಸಿಗುತ್ತವೆ. ಈ ರೀತಿಯ ವೈಯಕ್ತಿಕ ಎನಿಸುವ ವಿವರಗಳನ್ನು, ಅದರಲ್ಲಿಯೂ ಹೆಣ್ಣಿನ ಕುರಿತಾದ ವಿವರಗಳನ್ನು ಪ್ರಕಟಿಸುವ ಮೊದಲು, 'ಇದು ಸಾಧುವೇ? ನಿಜವೇ? ನನ್ನ ಸಾಮಾಜಿಕ ಜವಾಬ್ದಾರಿ ಏನು?' ಎಂದೆಲ್ಲ ಯೋಚಿಸುವುದು ಒಳಿತು. ನನ್ನ ಮನೆಯ ತಾಯಿ ಅಕ್ಕ ತಂಗಿಯರು ಈ ಜಾಗದಲ್ಲಿ ಇದ್ದರೆ ಅವರ ಸ್ಥಿತಿ ಏನಾಗಬಹುದು? ಎಂದು ಯೋಚಿಸುವ ಮನಸ್ಥಿತಿ ಇದ್ದರೆ ಹೀಗಾಗಲಾರದು.

ಧಾರ್ಮಿಕವಾದ ಭಾವನೆಗಳನ್ನು, ಕೋಮುಭಾವನೆಗಳನ್ನು ಕೆರಳಿಸುವ, ಪೋಸ್ಟ್‌ಗಳೂ ಆತಂಕಕಾರಿ ಸ್ಥಿತಿಯನ್ನು ಹುಟ್ಟುಹಾಕುತ್ತದೆ. ಜನ ಬಹಳ ಬೇಗ ಸುಳ್ಳು ಪೋಸ್ಟ್‌ಗಳನ್ನು ಸತ್ಯ ಎಂದೇ ನಂಬುತ್ತಾರೆ. ಯಾರೋ ಮೂರ್ತಿಯನ್ನು